**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No.**185/2020

**PW.** 1

**CW.** 1

**ಸಾಕ್ಷಿಯ ಹೆಸರು – ತಾಯಮ್ಮ**

**ಗಂಡನ ಹೆಸರು – ದಾಸಪ್ಪ**

**ವಯಸ್ಸು – 62 ವರ್ಷಗಳು** ದಿನಾಂಕ **23.12.2024** ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ – ಗೃಹಿಣಿ**

**ವಾಸಸ್ಥಳ – ಚಾಮಲಾಪುರ, ಹೆಚ್.ಡಿ. ಕೋಟೆ**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ಮೃತ ದಾಸಶೆಟ್ಟಿ ನಮ್ಮ ಯಜಮಾನರು. ಚಾಸಾ 4, 13, 16 ನನ್ನ ಮಕ್ಕಳು. ಚಾಸಾ 8 ನನ್ನ ಸೊಸೆ (ಚಾಸಾ 13 ರವರ ಹೆಂಡತಿ). ಎಲ್ಲಾ ಆರೋಪಿ ನಮ್ಮ ಎದುರು ಮನೆಯ ನಿವಾಸಿಗಳು. 1 ನೇ ಆರೋಪಿ ಈ ಹಿಂದೆ ಗ್ರಾಮ ಪಂಚಾಯ್ತಿ ಸದಸ್ಯನಾಗಿದ್ದನು. ಚಾಸಾ 8 ನಮ್ಮ ಊರಿನ ಅಂಗನವಾಡಿ ಕಾರ್ಯಕರ್ತೆ. ಈಗ್ಗೆ 8 ವರ್ಷಗಳ ಹಿಂದೆ ನಮ್ಮ ಮನೆಯ ಹಿಂದೆ ನನ್ನ ಗಂಡ ವಿಷ ಕುಡಿದು ಒದ್ದಾಡುತ್ತಿದ್ದರು, ಆಗ ಆರೋಪಿ ಅವರ ಬಳಿ ಇದ್ದರು. ಚಾಸಾ 2 ಮತ್ತು 11 ರವರು ನನ್ನ ಗಂಡನನ್ನು ಮೈಸೂರಿನ ಕೆ.ಆರ್. ಆಸ್ಪತ್ರೆಗೆ ಕರೆದುಕೊಂಡು ಹೋದರು. ನನ್ನ ಗಂಡ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಾಗ 4 ದಿನಗಳ ನಂತರ ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾನೆ. ಆ ಬಗ್ಗೆ ನಾನು ಹೆಚ್.ಡಿ. ಕೋಟೆ ಪೊಲೀಸ್ ಠಾಣೆಗೆ ಹೋಗಿ ಹೇಳಿಕೆ ಕೊಟ್ಟಿರುತ್ತೇನೆ. ಸದರಿ ದೂರಿಗೆ ಹೆಬ್ಬೆಟ್ಟು ಒತ್ತಿ ಸಹಿ ಮಾಡಿದ್ದೇನೆ.

ನನ್ನ ಗಂಡ ವಿಷ ಸೇವಿಸಿದ ದಿನ 1 ನೇ ಆರೋಪಿ ಮತ್ತು ಇತರರು ಅಂಗನವಾಡಿ ಬಳಿ ಹೋಗಿ ಸರಿಯಾಗಿ ಊಟ ಕೊಡುವುದಿಲ್ಲ ಎಂದು ಗಲಾಟೆ ಮಾಡಿದರು. ಅದೇ ದಿನ ಸಂಜೆ ಸುಮಾರು 5.30 ಗಂಟೆ ಸಮಯದಲ್ಲಿ ಎಲ್ಲರು ನಮ್ಮ ಮನೆಯ ಬಳಿ ದೊಣ್ಣೆ, ಮಚ್ಚಿನಿಂದ ಹೊಡೆದು ಗಲಾಟೆ ಮಾಡಿದರು. ಚಾಸಾ 4 ಮತ್ತು 13 ಗಲಾಟೆಯಲ್ಲಿ ಗಾಯಗೊಂಡಿದ್ದರು. ನಂತರ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದರು. ನಂತರ ನನ್ನ ಗಂಡ ಮನೆಯ ಹಿಂದೆ ದನ ಕಟ್ಟಿಹಾಕಲು ಹೋಗಿದ್ದಾಗ ಆರೋಪಿತರು ಸದರಿ 7 ಗಂಟೆ ಸುಮಾರಿಗೆ ನಮ್ಮ ಮನೆಯ ಬಳಿ

ಬಂದು ಅವಾಚ್ಯ ಶಬ್ಧಗಳಿಂದ ಬೈದು ನೀನಿನ್ನು ಜೀವಂತವಾಗಿದ್ದಿಯಾ ಎಂದು ಬೈದು, ಅವಮಾನ ಮಾಡಿರುತ್ತಾರೆ. ಆ ಸಮಯದಲ್ಲಿ ಅಕ್ಕಪಕ್ಕದ ಮನೆಯವರು ಯಾರೂ ಇರಲಿಲ್ಲ. ನನ್ನ ಮಕ್ಕಳು ಮತ್ತು ಗಂಡನ ಜೊತೆ ಗಲಾಟೆ ಮಾಡಿದ ಆರೋಪಿತರರನ್ನು ನ್ಯಾಯಾಲಯದಲ್ಲಿ ನೋಡಿದರೆ ಗುರುತಿಸುತ್ತೇನೆ. ಸುಮಾರು 20 ವರ್ಷಗಳಿಂದ ಆರೋಪಿತರರಿಗೂ ಮತ್ತು ನಮಗೂ ಜಾಗದ ಸಲುವಾಗಿ ಸಂಟೆ ಇತ್ತು. ನನ್ನ ಗಂಡ ಸಾಯುವ 7 ವರ್ಷಗಳ ಮುಂಚಿನಿಂದ ಚಾಸಾ 8 ಅಂಗನವಾಡಿ ಕಾರ್ಯಕರ್ತೆಯಾಗಿ ಕೆಲಸ ಮಾಡುತ್ತಿದ್ದರು.

**ಪಾಟೀಸವಾಲುಃ- ಆರೋಪಿ ಪರ ಶ್ರೀ ಕೆ.ಸಿ.ಬಿ ವಕೀಲರಿಂದಃ-**

2016 ನೇ ಇಸವಿಯಲ್ಲಿ 1 ನೇ ಆರೋಪಿ ಗ್ರಾಮ ಪಂಚಾಯ್ತಿ ಸದಸ್ಯನಾಗಿದ್ದನು ಎಂದರೆ ಸರಿ. ನನ್ನ ಗಂಡ ವಿಷ ಕುಡಿದ ದಿನಾಂಕ ನನಗೆ ಹೇಳಲು ಬರುವುದಿಲ್ಲ. ಸಾರ್ವಜನಿಕರಿಂದ ಬಂದ ದೂರಿನ ಮೇರೆಗೆ 1 ನೇ ಆರೋಪಿ ಅಂಗನವಾಡಿ ಕೇಂದ್ರದ ಬಳಿ ಹೋಗಿ ಮಕ್ಕಳಿಗೆ ಮತ್ತು ಬಾಣಂತಿಯರಿಗೆ ಸರಿಯಾಗಿ ಆಹಾರ ವಿತರಣೆ ಮಾಡಬೇಕೆಂದು ಕೇಳಿದರು ಎಂದರೆ ಸರಿಯಲ್ಲ. ನನ್ನ ಗಂಡ ಮತ್ತು ಮಕ್ಕಳು ಹಲ್ಲೆ ಮಾಡಿದ ಬಗ್ಗೆ ಆರೋಪಿ 1 ರವರು ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು ಎಂದರೆ ಸರಿ. ಆ ಬಗ್ಗೆ ನಮ್ಮ ವಿರುದ್ಧ ಎರಡು ಪ್ರಕರಣಗಳು ದಾಖಲಾಗಿದ್ದವು ಎಂದರೆ ಸರಿ. 1 ನೇ ಆರೋಪಿಯು ನಮ್ಮ ವಿರುದ್ಧ ಸುಳ್ಳು ದೂರು ನೀಡಿದರು ಎಂದು ನುಡಿಯುತ್ತಾರೆ.

ನನ್ನ ಗಂಡ ನಮ್ಮ ಮನೆಯ ಹಿಂಭಾಗದಲ್ಲಿ ವಿಷ ಕುಡಿದ ದಿನ ನಮ್ಮ ಮನೆಯಲ್ಲಿ 4 ಜನ ಇದ್ದೇವು. ಸಂಜೆ 7 ಗಂಟೆಗೆ ನನ್ನ ಗಂಡ ವಿಷ ಸೇವಿಸಿದ್ದು, ತಕ್ಷಣ ಕೆ.ಆರ್.ಆಸ್ಪತ್ರೆಗೆ ಕರೆದುಕೊಂಡು ಹೋದೆವು. ನನ್ನ ಗಂಡ ವಿಷ ಸೇವಿಸಿದ್ದ ಸಮಯದಲ್ಲಿ ಅವರ ಜೊತೆ ಯಾರು ಇರಲಿಲ್ಲ. ಆ ಸಮಯದಲ್ಲಿ ನಾನು ಮನೆಯಲ್ಲಿ ಇಲ್ಲದ ಕಾರಣ ಸ್ಥಳದಲ್ಲಿ ಏನಾಯಿತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನನ್ನ ಗಂಡ ವಿಷ ಕುಡಿದ ದಿನವೇ ಪೊಲೀಸರಿಗೆ ದೂರು ನೀಡಲು ತೊಂದರೆ ಇರಲಿಲ್ಲ ಎಂದರೆ ಸರಿ. ನನ್ನ ಗಂಡ ಮರಣ ಹೊಂದಿದ ದಿನವೇ ಪೊಲೀಸ್ ಠಾಣೆಯಲ್ಲಿ ದೂರು ನೀಡಿದೇವು. ನನ್ನ ಗಂಡ ವಿಷ ಕುಡಿದ ಸಮಯದಲ್ಲಿ ನನ್ನ ಮಕ್ಕಳು ಮತ್ತು ಚಾಸಾ 8 ಆಸ್ಪತ್ರೆಯಲ್ಲಿದ್ದರು. ಅದೇ ದಿನ ಆರೋಪಿತರು ಕೂಡ ಆಸ್ಪತ್ರೆಯಲ್ಲಿದ್ದರು ಎಂದರೆ ಸರಿ. ಆರೋಪಿತರು ಒಂದು ವಾರದ ವರೆಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದರು ಎಂದರೆ ಸರಿಯಲ್ಲ. ನನಾನು ಪೊಲೀಸರಿಗೆ ನೀಡಿದ ದೂರಿನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಅದನ್ನು ಪೊಲೀಸರು ಬರೆದರು. ದೂರು ಬರೆಯಲು ನಾನೇ ಮಾಹಿತಿಯನ್ನು ನೀಡಿದ್ದೇನೆ.

ಕೆ.ಆರ್. ಆಸ್ಪತ್ರೆಗೆ ನನ್ನ ಗಂಡನನ್ನು ಸಂಜೆ 7.30 ಗಂಟೆಗೆ ಕರೆದುಕೊಂಡು ಹೋದೇವು. ಆರೋಪಿತರು ನಮ್ಮ ಮನೆಯ ಮುಂದೆ ಸಂಜೆ 5.30 ಗಂಟೆಗೆ ಸೇರಿಕೊಂಡಿದ್ದರು. ಆರೋಪಿತರು ನಮ್ಮ ಮನೆಯ ಬಳಿ ಬಂದಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ವಿಷ ಸೇವನೆ ಮಾಡಲು ಆರೋಪಿತರು ಪ್ರಚೋದನೆ ಮಾಡಿಲ್ಲ ಎಂದರೆ ಸರಿಯಲ್ಲ. ಗಲಾಟೆ ಶಬ್ಧ ಕೇಳಿ ನಾನು ಸ್ಥಳಕ್ಕೆ ಹೋದೆ. 1ನೇ ಆರೋಪಿಯು ನನ್ನ ಗಂಡನಿಗೆ ಸಾಯಿ ಎಂದು ಬೈದು ವಿಷ ಕುಡಿಯಲು ಪ್ರಚೋದನೆ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನನ್ನ ಗಂಡನಿಗೆ ಅವಾಚ್ಯ ಶಬ್ಧಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. ನನ್ನ ಮಕ್ಕಳು ಆರೋಪಿತರರಿಗೆ ಹೊಡೆದು, ಅವರ ವಿರುದ್ಧ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.